<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 35-24** **ಪಿಡಬ್ಲ್ಯೂ ಃ** <u>**7**</u>

**ಸಿಡಬ್ಲ್ಯೂ ಃ** <u>**14**</u>

ಸಾಕ್ಷಿದಾರರ ಹೆಸರು ಃ ಷಣ್ಮುಖಪ್ಪ ದುಂಡಪ್ಪನವರ

ತಂದೆ ಹೆಸರು ಃ ಬಸವಂತಪ್ಪ

ವಯಸ್ಸು ಃ 38 ವರ್ಷ

ಉದ್ಯೋಗ ಃ ಪೋಲಿಸ ಪೇದೆ

ವಾಸಸ್ಥಳ ಃ ಪೂರ್ವ ಸಂಚಾರಿ ಪೋಲಿಸ ಠಾಣೆ, ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಜುಲೈ 2022 ರಿಂದ ಇಲ್ಲಿಯವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆ, ಹುಬ್ಬಳ್ಳಿ ಯಲ್ಲಿ ಪೋಲಿಸ ಪೇದೆ ಅಂತಾ ಸೇವೆ ಸಲ್ಲಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿ ಚಾಸಾ-17 ರವರ ನಿರ್ದೇಶನದ ಮೇರೆಗೆ ದಿಃ 4.11.2023 ರಂದು ಎಸ್ ವಿ ಧಾವಾಡ ರವರು ತೋರಿಸಿದ ಆಟೋ ರಿಕ್ಷಾ ತಡೆಹಿಡಿಯುವ ಪಂಚನಾಮೆಗೆ ಪೋಟೋ ತೆಗೆದಿದಿದ್ದೇನೆ. ಸಹದೇವಪ್ಪ ರವರು ತೋರಿಸಿದ ಅಪಘಾತ ಪಡಿಸಿದ ಸ್ಥಳದ ಪಂಚನಾಮೇ ಪೊಟೋ ತೆಗೆದಿದ್ದೇನೆ. ಅದೇ ರೀತಿ ದಿಃ 12.11.2023 ರ ಂದು ತನಿಖಾಧಿಕಾರಿ ಜಾಕ್ಸನ್ ಆರ್ ಡಿಸೋಜಾ ರವರು ಗರೀಬಪ್ಪ ತಂದೆಃ ದುರಗಪ್ಪ ರವರ ಇನ್ವೆಕ್ವೆಸ್ಟ ಪಂಚನಾಮೆ ಕಾಲಕ್ಕೆ ವಿವೋ ಕಂಪನಿ ಮೊಬೈಲದಲ್ಲಿ ಛಾಯಾಚಿತ್ರ ತೆಗೆದು, ಸದರಿ ಮೊಬೈಲ್ ದಲ್ಲಿ ಸೆರೆ ಹಿಡಿದ ಛಾಯಾಚಿತ್ರಗಳನ್ನು ಹುಬ್ಬಳ್ಳಿ ಮಾರುತಿ ಪೊಟೋ ಸ್ಟುಡಿಯೋದಲ್ಲಿ ಪ್ರಿಂಟ ತೆಗೆದು ಯಥಾವತ್ತಾಗಿ ಠಾಣೆ ಗಣಕ ಯಂತ್ರದಲ್ಲಿ ಡೌನಲೋಡ ಮಾಡಿ ಸಿ ಡಿ ಯಲ್ಲಿ ಅಳವಡಿಸಿ ಭಾವ ಚಿತ್ರ ಹಾಗೂ ಸಿ ಡಿ ಗಳನ್ನು ಕೊಟ್ಟಿದ್ದು ಈ ಕುರಿತು ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ-65 ಬಿ ಅಡಿಯಲ್ಲಿ ಪ್ರಮಾಣ ಪತ್ರ ನೀಡಿದ್ದು, ಸದರಿ ಪ್ರಮಾಣ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.16-ಎ ಎಂದು ಗುರುತಿಸಲಾಯಿತು. ಸಾಕ್ಷಿ ಯೂ ನಿಪಿ.2 ರಿಂದ 5 ನೋಡಿ ಗುರುತಿಸಿದ್ದಾರೆ.

ಅದೇ ರೀತಿ ಶವ ಪಂಚನಾಮೆ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.17 ಹಾಗೂ 18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್ ವಕೀಲರಿಂದಃ**

ಪೊಟೋ ದಲ್ಲಿ ನಿಖರ ಸ್ಥಳ ಗೊತ್ತಾಗುವುದಿಲ್ಲ ಅಂದರೆ ಸರಿಯಲ್ಲ. ಪೋಟೋ ನೋಡಿದರೆ ನಿರ್ದಿಷ್ಟ ಚಕ್ಕುಬಂದಿ ಹೇಳಲು ಬರುವುದಿಲ್ಲ ಅಂದರೆ ಸರಿ. ಪೊಟೋಗಳನ್ನು ಸೃಷ್ಟಿ ಮಾಡಬಹುದು, ಆದರೆ ನಾನು ಮಾಡಿಲ್ಲ. ನಾನು ಪೊಟೋಗಳನ್ನು ಸೃಷ್ಟಿ ಮಾಡಿದ್ದೇನೆ. ಪೊಟೋಗ್ರಾಫರ ಬಂದಿದ್ದರೆ ನಿಜಾಂಶ ಗೊತ್ತಾಗುತ್ತದೆ ಅಂದರೆ ಸರಿಯಲ್ಲ. ದೂರುದಾರನ ಮಾತು ಕೇಳಿ ಸುಳ್ಳು ಪೊಟೋ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.